# ವಿಜಯಪುರ ಜಿಲ್ಲೆಯ ಪ್ರಾಚೀನ ಕಾಲದ ಶೈಕ್ಷಣಿಕ ಕೇಂದ್ರಗಳು

**ಅಪ್ಪು ಕ. ಜಾಧವ***

**DOI: https://doi.org/10.5281/zenodo.21253121**

**ABSTRACT**

ವಿಜಯಪುರ ಜಿಲ್ಲೆಯು ಪ್ರಾಚೀನ ಕಾಲದಿಂದಲೂ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಭವ್ಯ ಬೀಡಾಗಿದೆ. ವೇದಗಳ ಕಾಲದಿಂದ ಹಿಡಿದು ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು ಹಾಗೂ ಯಾದವರ ಆಳ್ವಿಕೆಯವರೆಗೆ ಇಲ್ಲಿನ ಶಿಕ್ಷಣ ವ್ಯವಸ್ಥೆಯು ಅಗ್ರಹಾರಗಳು, ಬ್ರಹ್ಮಪುರಿಗಳು ಮತ್ತು ಘಟಿಕಾಸ್ಥಾನಗಳ ಮುಖಾಂತರ ಅತ್ಯುನ್ನತ ಮಟ್ಟದಲ್ಲಿತ್ತು. ಅಂದಿನ ಗುರುಕುಲ ಪದ್ಧತಿಯಲ್ಲಿ ವಿದ್ಯಾದಾನವನ್ನು ಅತಿ ಶ್ರೇಷ್ಠ ದಾನವೆಂದು ಪರಿಗಣಿಸಲಾಗುತ್ತಿತ್ತು ಎಂಬುದನ್ನು ಶಾಸನಗಳು ದೃಢಪಡಿಸುತ್ತವೆ. ಅಗರಖೇಡ, ಇಂಗಳೇಶ್ವರ, ಕಡ್ಲೇವಾಡ, ಕೋಲಾರ, ಮುತ್ತಗಿ, ಮನಗೂಳಿ ಹಾಗೂ ಸಾಲೋಟಗಿಯಂತಹ ಪ್ರಮುಖ ವಿದ್ಯಾಕೇಂದ್ರಗಳ ಐತಿಹಾಸಿಕ ಹಿನ್ನೆಲೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ದೇಶದ ನಾನಾ ಭಾಗಗಳಿಂದ ಮಾತ್ರವಲ್ಲದೆ, ಕಾಶ್ಮೀರದಿಂದಲೂ ಪಂಡಿತರು ಈ ಕೇಂದ್ರಗಳಿಗೆ ಆಗಮಿಸುತ್ತಿದ್ದ ವಿವರಗಳು ಈ ಪ್ರದೇಶದ ಶೈಕ್ಷಣಿಕ ಹಿರಿಮೆಯನ್ನು ಸಾರುತ್ತವೆ. ನಾಡಿನ ಪ್ರಾಚೀನ ಶಿಕ್ಷಣ ಪದ್ಧತಿ, ಗುರು–ಶಿಷ್ಯ ಪರಂಪರೆ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಅರಿಯಲು ಈ ಶಾಸನಬದ್ಧ ದಾಖಲೆಗಳು ಅತ್ಯಮೂಲ್ಯವಾಗಿವೆ.

**KEYWORDS:** ವಿಜಯಪುರ ಜಿಲ್ಲೆ, ಪ್ರಾಚೀನ ವಿದ್ಯಾಕೇಂದ್ರಗಳು, ಅಗ್ರಹಾರಗಳು, ಶಾಸನಗಳು, ಶಿಕ್ಷಣ ಪದ್ಧತಿ.

* **ಡಾ. ಅಪ್ಪು ಕ. ಜಾಧವ,** ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಶ್ರೀ ಸಂಗಮೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ.

ವಿಜಯಪುರ ಜಿಲ್ಲೆಯು ಪ್ರಾಚೀನ ಕಾಲದಿಂದಲೂ ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಹಿರಿಮೆಯನ್ನು ಪಡೆದ ಪ್ರದೇಶವಾಗಿದೆ. ವೇದಗಳ ಕಾಲದಿಂದ ಶಿಕ್ಷಣ ತಂದೆಯ ಮೂಲಕ ಮಗನಿಗೆ ದೊರೆಯುತ್ತಿತ್ತು. ಸಾಮಾನ್ಯವಾಗಿ ಎಲ್ಲಾ ಗುರುಕುಲಗಳು ವಿದ್ಯಾಕೇಂದ್ರಗಳಾಗಿದ್ದು, ಇವುಗಳಲ್ಲಿ ಗುರುವು ಪೂಜ್ಯನೂ ಪಾಲಕನೂ ಆಗಿದ್ದನು. ವಿದ್ಯಾರ್ಥಿಗಳೆಲ್ಲ ಇಲ್ಲಿಯೇ ವಾಸಿಸುತ್ತ ಗುರು ಸೇವೆಯಲ್ಲಿ ನಿರತರಾಗಿದ್ದುದರಿಂದ ಗುರು–ಶಿಷ್ಯ ಸಂಬಂಧ ಅನ್ಯೋನ್ಯವಾಗಿತ್ತು. ಸಕಲ ದಾನಗಳಲ್ಲಿ ವಿದ್ಯಾದಾನ ಶ್ರೇಷ್ಠವೆಂಬುದು ಜನಮತವಾಗಿತ್ತು. ದೇವಾಲಯಗಳಿಗೆ ದಾನದತ್ತಿ ಬಿಡುವಾಗ ವಿದ್ಯಾಭ್ಯಾಸಕ್ಕೆ ಇಂತಿಷ್ಟು ಎಂದು ನಿಗದಿ ಪಡಿಸುತ್ತಿದ್ದರು.

ಪ್ರಾಚೀನ ಕಾಲದಲ್ಲಿ ವಿದ್ಯೆಯು ಅಗ್ರಹಾರಗಳಲ್ಲಿ, ಗ್ರಾಮದೇವಾಲಯಗಳಲ್ಲಿ ಅಥವಾ ಅದಕ್ಕೆ ಹೊಂದಿಕೊಂಡಿರುವ ಮಠಗಳಲ್ಲಿ ನಡೆಯುತ್ತಿತ್ತು. ಪುರಾಣ, ಬಾಲಶಿಕ್ಷೆ, ನ್ಯಾಸದ ವ್ಯಾಖ್ಯಾನ ಬೋಧಿಸಲ್ಪಡುತ್ತಿತ್ತು. ಬಾಲಶಿಕ್ಷೆ–ಪ್ರಾಥಮಿಕ ಹಂತ, ನ್ಯಾಸದ ವ್ಯಾಖ್ಯಾನವು ಪ್ರೌಢವಿದ್ಯಾಭ್ಯಾಸವು ಮುಂದುವರೆಯಲು ಅವರ ಊಟ ವಸತಿ, ಔಷಧಿ, ಉಪಚಾರಗಳಿಗಾಗಿ ದಾನಬಿಟ್ಟ ಸಂಗತಿಗಳು ಶಾಸನಗಳಿಂದ ತಿಳಿದು ಬರುತ್ತದೆ. ಒಟ್ಟಿನಲ್ಲಿ ಅಗ್ರಹಾರ, ಬ್ರಹ್ಮಪುರಿ ಮತ್ತು ಘಟಿಕಾಸ್ಥಾನ ಇವುಗಳ ಮೂಲಕ ಶಿಕ್ಷಣವನ್ನು ಪಡೆಯುತ್ತಿದ್ದರು.

**ಪ್ರಾಚೀನ ವಿದ್ಯಾಕೇಂದ್ರಗಳು:**

**ಅಗರ್ ಖೇಡ:** ಅಗರ ಖೇಡವು ಭೀಮಾನದಿ ತೀರದಲ್ಲಿರುವ ಒಂದು ಪ್ರಮುಖ ಸ್ಥಳವಾಗಿದ್ದು ಇಂಡಿಯಿಂದ ಉತ್ತರಕ್ಕೆ 18 ಕಿ. ಮೀ. ದೂರದಲ್ಲಿದೆ. ಆರನೇಯ ವಿಕ್ರಮಾದಿತ್ಯನ ಶಾಸನಗಳಲ್ಲಿ ಈ ಸ್ಥಳವನ್ನು ಅಗ್ರಹಾರ ಖೇಡ–12ರ ಆಡಳಿತ ಕೇಂದ್ರವೆಂದು ಉಲ್ಲೇಖಿಸಲಾಗಿದೆ. ಈ ಊರಿನಲ್ಲಿರುವ ಪ್ರಮುಖ ದೇವಾಲಯಗಳೆಂದರೆ ಭೈರಪ್ಪ ಅಥವಾ ಭೈರಸಿದ್ದೇಶ್ವರ, ಶಂಭುಲಿಂಗ ಮುಂತಾದವು. ಇದೇ ಊರಿನ ಹನುಮಂತ ದೇವಾಲಯದ ಗೋಡೆಯಲ್ಲಿ ನಿರ್ಮಿಸಲಾಗಿರುವ ಕ್ರಿ.ಶ. 1248ರ ಶಿಥಿಲವಾದ ಶಾಸನವು ಅಗ್ರಹಾರ ಖೇಡದ ಮಹಾಜನಗಳ ಸಮ್ಮುಖದಲ್ಲಿ ಹುಲಸೂರಿನ ದೇಸಿಯಗಣದ ಜೈನ ಸನ್ಯಾಸಿಗೆ ನೀಡಿದ ದಾನಗಳನ್ನು ಉಲ್ಲೇಖಿಸುತ್ತದೆ. ಇದೇ ಗ್ರಾಮದಲ್ಲಿ ದೊರೆತ ಕ್ರಿ. ಶ. 1250ರ ಶಾಸನದ ಪ್ರಕಾರ ಪ್ರಾಚೀನ ಕಾಲದಲ್ಲಿ ಈ ಸ್ಥಳವು ಒಂದು ಪ್ರಮುಖ ಅಗ್ರಹಾರವಾಗಿತ್ತೆಂದು ತಿಳಿದು ಬರುತ್ತದೆ.

**ಇಂಗಳೇಶ್ವರ:** ಇಂಗಳೇಶ್ವರವು ಬಸವನ ಬಾಗೇವಾಡಿಯಿಂದ ಈಶಾನ್ಯಕ್ಕೆ 10 ಕಿ.ಮೀ. ದೂರದಲ್ಲಿರುವ ಪ್ರಾಚೀನ ಸ್ಥಳವಾಗಿದ್ದು ಶಾಸನಗಳಲ್ಲಿ 'ಇಂಗಳೇಶ್ವರ', 'ಅಗ್ರಹಾರ ಇಂಗಳೇಶ್ವರ', ಕರ್ನಾಟಕದ 'ಕಾಶೀಪುರಂ' ಮೊದಲಾದ ಹೆಸರುಗಳಿಂದ ಉಲ್ಲೇಖಿಸಲ್ಪಟ್ಟಿದೆ. ಈ ಊರು ತರ್ದವಾಡಿ ಸಾಸಿರವೆಂಬ ಆಡಳಿತ ವಿಭಾಗದ ಭಾಗವಾಗಿತ್ತೆಂದು ಹಲವಾರು ಶಾಸನಗಳಿಂದ ವ್ಯಕ್ತವಾಗುತ್ತದೆ. ಹನ್ನೆರಡನೇ ಶತಮಾನದ ಆಗ್ಗಳನೆಂಬ ಜೈನ ಕವಿಯು ತನ್ನ ಪುರಾಣ ಕಾವ್ಯದಲ್ಲಿ ಇಂಗಳೇಶ್ವರದ ಚಂದ್ರಪ್ರಭ ತೀರ್ಥಂಕರನನ್ನು ನಾಯಕನಾಗಿಸಿದ ಬಗೆಗೆ ಉಲ್ಲೇಖಿಸುತ್ತಾನೆ. ಇದು ಜೈನ ಹಾಗೂ ಶೈವ ಧರ್ಮಗಳ ಕೇಂದ್ರವಾಗಿತ್ತೆಂದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಇಲ್ಲಿಂದ ಬೆಳೆದು ಬಂದ ಜೈನ ಗುರುಗಳ ಒಂದು ಪರಂಪರೆಯನ್ನು 'ಇಂಗಳೇಶ್ವರ ಬಳಿ' ಎಂದು ಕರೆಯಲಾಗಿದೆ. ಊರಿನಲ್ಲಿ ಎಂಟು ಪುರಾತನ ದೇವಾಲಯಗಳಿದ್ದು ಅವುಗಳಲ್ಲಿ ಎರಡು ಗುಹಾ ದೇವಾಲಯಗಳೆಂದರೆ ಕಲ್ಲಮೇಶ್ವರ, ಸೋಮೇಶ್ವರ, ನಾರಾಯಣ, ರೇವಣಸಿದ್ದೇಶ್ವರ, ಸಂಗಮೇಶ್ವರ ಮೊದಲಾದವುಗಳನ್ನು ಉದಾಹರಿಸಬಹುದಾಗಿದೆ. ಈ ದೇವಾಲಯಗಳ ಪೈಕಿ ಶೋಭನದೇವನ ಗುಡಿ

ದೇವಾಲಯವನ್ನು ಕ್ರಿ.ಶ. 1128ರಲ್ಲಿ ನೀಲಕಂಠ ನಾಯಕನೆಂಬ ಅಧಿಕಾರಿಯು ನಿರ್ಮಿಸಿದನೆಂದು ಶಾಸನಗಳಿಂದ ವ್ಯಕ್ತವಾಗುತ್ತದೆ.

ಶೋಭನದೇವನ ಗುಡಿಯ ಶಾಸನದಲ್ಲಿ ಉಲ್ಲೇಖಗೊಂಡಿರುವಂತೆ ಈ ಸ್ಥಳದಲ್ಲಿ ಪೌರಾಣಿಕ ಕಾಲದಲ್ಲಿ ಜನಮೇಜಯ ಚಕ್ರವರ್ತಿಯು ಅಗ್ರಹಾರವನ್ನು ಸ್ಥಾಪಿಸಿ ಇದನ್ನು ಕರ್ನಾಟಕದ ಕಾಶಿಯೆಂದು ಕರೆದಿರುವ ಬಗ್ಗೆ ಈ ಶಾಸನದಲ್ಲಿ ಉಲ್ಲೇಖವಿದೆ.

**ಕಡ್ಲೇವಾಡ:** ಸಿಂದಗಿಯಿಂದ 30 ಕಿ. ಮೀ. ದೂರದಲ್ಲಿರುವ ಕಡ್ಲೇವಾಡವು ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಲೋಕವಿಖ್ಯಾತ ಘಟಿಕಾಸ್ಥಾನವಾಗಿತ್ತೆಂದು ಮತ್ತು ಎಂಟು ಬ್ರಹ್ಮಪುರಿಗಳು ಕೇಂದ್ರ ವಿದ್ಯಾಸ್ಥಾನವಾಗಿತ್ತೆಂದು ಚಾಳುಕ್ಯರ ಕ್ರಿ.ಶ. 1192ರ ಶಾಸನವು ಉಲ್ಲೇಖಿಸುತ್ತದೆ. ದೇವಣಗಾಂವ್ ಹತ್ತಿರ ಭೀಮಾ ನದಿಯ ದಕ್ಷಿಣ ದಂಡೆಯ ಮೇಲೆ ಇರುವ ಪೂರ್ವಾಭಿಮುಖವಾಗಿರುವ ಈ ಸ್ಥಳದಲ್ಲಿ ನಿರ್ಮಿತವಾಗಿರುವ ಕಲ್ಯಾಣ ಚಾಳುಕ್ಯಶೈಲಿಯ ಸೋಮೇಶ್ವರ ದೇವಾಲಯವು ಒಂದು ಸಂಕೀರ್ಣ ಕಟ್ಟಡವಾಗಿದೆ. ಇದಕ್ಕೆ ದಕ್ಷಿಣ ಕಾಶಿ ಎಂದೂ ಶಾಸನಗಳಲ್ಲಿ ಉಲ್ಲೇಖಿಸಲಾಗಿದ್ದು, ಸ್ಥಳೀಯವಾಗಿ ಸ್ವಾಮಿಲಿಂಗ ಅಥವಾ ಸೋಮನಾಥ ದೇವಾಲಯವೆಂದು ಕರೆಯಲಾಗುತ್ತದೆ. ಈ ದೇವಾಲಯದ ಸಮೀಪವಿರುವ ಭೀಮಾ ನದಿಯ ಮಧ್ಯದಲ್ಲಿ 364 ಜ್ಯೋತಿರ್ಲಿಂಗಗಳು ಕಂಡುಬಂದಿವೆ ಎಂದು ಪ್ರತೀತಿ ಇದೆ.

ಕ್ರಿ. ಶ. 1192ರಲ್ಲಿ ಮಹಾಪ್ರಧಾನ ಸೋಯಿದೇವ ದಂಡನಾಯಕನು ಕಡಲೇವಾಡದ ಹಿರಿಯ ಮಠ(ಸ್ವಯಂಭೂ ಸೋಮನಾಥ)ದ ಆವರಣದಲ್ಲಿರುವ ಮಾಣಿಕೇಶ್ವರ ಕೈಂಕರ್ಯಕ್ಕಾಗಿ ಶೆಟ್ಟಿಮಯ್ಯನು ಆಚಾರ್ಯರಿಗೆ ನೀಡಿದ ದಾನಗಳನ್ನು ಉಲ್ಲೇಖಿಸುತ್ತದೆ. ಶಾಸನದಲ್ಲಿ ಕುಂಬಿಟ್ಟಿಗೆ ಮುಂತಾದ ಸ್ಥಳನಾಮಗಳ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಎಂಟು ಬ್ರಹ್ಮಪುರಿಗಳ ಉಪಾಧ್ಯಾಯರುಗಳಿಗೆ ನೀಡಿದ ದಾನವನ್ನು ಉಲ್ಲೇಖಿಸುತ್ತದೆ.

**ಕೋಲಾರ:** ಕೋಲಾರವು ಬಸವನ ಬಾಗೇವಾಡಿ ತಾಲೂಕಿನಲ್ಲಿ ಬರುತ್ತದೆ. ಕೃಷ್ಣನದಿಯ ಬಲದಂಡೆಯಲ್ಲಿರುವ ಶಾಸನೋಕ್ತ 'ಅಗ್ರಹಾರ ಕೋಲಾರ'ವೆಂಬ ಪ್ರಾಚೀನ ಸ್ಥಳವಾಗಿದೆ. ಈ ಊರಿಂದ ನದಿತೀರವು ಸು. ಒಂದು ಕಿ. ಮೀ. ದೂರದಲ್ಲಿದ್ದು ಪ್ರಶಾಂತವಾದ ವಾತಾವರಣವನ್ನುಂಟು ಮಾಡಿದೆ. ಇದೇ ಊರಿನ ಭೋಜ ನಾಯಕನ ಮನೆಯ ಮುಂದಿರುವ ಯಾದವ ಸಿಂಘಣನ ಕ್ರಿ. ಶ. 1223 ರ ಶಾಸನವು ಈ ಸ್ಥಳವನ್ನು ದಕ್ಷಿಣ ವಾರಣಾಸಿ ಎಂದು ಕರೆದು ಅಗ್ರಹಾರ ಕೋಲಾರ ಎಂದು ಉಲ್ಲೇಖಿಸುತ್ತದೆ. ಕೋಲಾರವು ಕ್ರಿ. ಶ. 16ನೇ ಶತಮಾನದಲ್ಲಿ ಆಡಳಿತದ ದೃಷ್ಟಿಯಿಂದ 'ಪರಗಣೆ' ಎಂದು ಗುರುತಿಸಲ್ಪಡುತ್ತಿತ್ತು. ಕ್ರಿ. ಶ. 16ನೇಯ ಶತಮಾನದಲ್ಲಿ ಈ ಪ್ರದೇಶವನ್ನು ಆಳುತ್ತಿದ್ದ ವಿಜಯನಗರದ ಅರಸು ಪ್ರೌಢದೇವರಾಯನು ಈ ದೇಶಗತಿಯನ್ನು ಉಂಬಳಿ ಹಾಕಿ ಕೊಟ್ಟಿದ್ದನು. ಈ ದೇಶಗತಿಯ ಮೂಲಪುರುಷನಾದ ಆದಶಪ್ಪನು ದೇಸಾಯಿಯಾಗಿದ್ದನು.

**ಮುತ್ತಗಿ:** ಈಗಿನ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಪಶ್ಚಿಮಕ್ಕೆ 12 ಕಿ. ಮೀ. ದೂರದಲ್ಲಿ ಮುತ್ತಗಿ ಗ್ರಾಮವಿದೆ. ಈ ಗ್ರಾಮಕ್ಕೆ ಸಾವಿರಾರು ವರ್ಷಗಳ ಪುರಾತನ ಇತಿಹಾಸವಿದ್ದು, ತನ್ನದೇ ಆದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವುದಕ್ಕೆ ಇಲ್ಲಿನ ಹದಿನಾರು ಶಾಸನಗಳು ಸಾಕ್ಷಿಯಾಗಿವೆ. ಬಾದಾಮಿ ಚಾಲುಕ್ಯರ, ಕಲ್ಯಾಣ ಚಾಲುಕ್ಯರ ಇತಿಹಾಸಕ್ಕೆ ಸಂಬಂಧಿಸಿದ ಬೇರುಗಳು ಇರುವುದು ಈ ಶಾಸನಗಳಿಂದ ತಿಳಿದು ಬರುತ್ತದೆ. ಇತಿಹಾಸ ಪ್ರಸಿದ್ಧವಾದ ಕುಂತಳನಾಡಿನ ಮಂಗಳವೇಡಿ ಸಾಸಿರ(ಸಾವಿರ)

ದ ಕಂಪಣ ಮುತ್ತಗಿ ಮೂವತ್ತರ ಪ್ರಮುಖ ಗ್ರಾಮವಾಗಿತ್ತು ಮತ್ತು ಶಾಸನಗಳಲ್ಲಿ ಮುತ್ತಗಿಯ ಮೂರ್ತಗಿರಿಯೆಂದು ಉಲ್ಲೇಖಗೊಂಡಿದೆ.

ಅಂದಿನ ಮುತ್ತಗಿಯು ಭೂಕೈಲಾಸದಂತಿದ್ದು ಕುಂತಳ ದೇಶವು ಉತ್ತರದ ವಿಂಧ್ಯಾಚಲದಿಂದ ದಕ್ಷಿಣದ ಹಿಂದೂ ಮಹಾಸಾಗರದವರೆಗೂ ಮತ್ತು ಪೂರ್ವದ ಬಂಗಾಲ ಉಪಸಾಗರದಿಂದ ಪಶ್ಚಿಮದ ಅರಬ್ಬಿ ಸಮುದ್ರದ ಅಂಚಿನವರೆಗೂ ಹಬ್ಬಿಕೊಂಡಿದ್ದು ತರ್ದವಾಡಿ ಸಾಸಿರ, ಮಂಗಳವೇಡ ಸಾಸಿರ, ಕಲ್ಯಾಣನಾಡು, ಸಗರ ನಾಡು, ಬೆಳವಲನಾಡು, ಬನವಾಸಿನಾಡು, ಕುಹುಂಡಿ ಪ್ರದೇಶ ಹೀಗೆ ಆಡಳಿತದ ಬಾಹುಗಳನ್ನು ವಿಸ್ತರಿಸಿಕೊಂಡಿದ್ದನ್ನು ಶಾಸನಗಳಲ್ಲಿ ಕಾಣಬಹುದಾಗಿದೆ. ಹಾಗೇಯೇ ತಿಕೇಶ್ವರ, ಭೋಗೇಶ್ವರ, ಪ್ರಸನ್ನ ಕೇಶವ, ಗೌರಿಶಂಕರ, ರಾಮೇಶ್ವರ, ಸಿದ್ದರಾಮೇಶ್ವರ ಇತ್ಯಾದಿ ದೇವಾಲಯಗಳನ್ನು ಹೊಂದಿದ್ದು ಈ ಗ್ರಾಮವು ಉತ್ತಮ ಅಗ್ರಹಾರವೆಂದು ಸಹ ಪ್ರಸಿದ್ಧಿ ಪಡೆದಿತ್ತು. ಕಲ್ಯಾಣ ಚಾಲುಕ್ಯರ ಅನೇಕ ದಂಡಾಧೀಶರುಗಳು ಇಲ್ಲಿ ಅಧ್ಯಯನ ಮಾಡಿದ್ದಾರೆ. ಗೋವಿಂದರಸ, ಬ್ರಹ್ಮದೇವರಸ, ಶಿವಪ್ಪರಸ, ಗಂಗಾಧರಸ ಮುಂತಾದವರ ಉಲ್ಲೇಖ ಶಾಸನಗಳಲ್ಲಿದೆ.

ಈ ಗ್ರಾಮದಲ್ಲಿ ನೂರಾರು ಜನ ವೇದಪಂಡಿತರು ನೆಲೆಸಿದ್ದರಿಂದ ಸರ್ವಧರ್ಮ ಶಾಸ್ತ್ರಗಳ ಕುರಿತು ಸಭೆ ಸಮಾರಂಭಗಳು ನಡೆಯುತ್ತಿದ್ದವು. ಸುಮಾರು 300 ಜನ ಕಾಶ್ಮೀರಿ ಪಂಡಿತರು ಇಲ್ಲಿಗೆ ಆಗಮಿಸಿ ಯಜ್ಞ-ಯಾಗಾದಿಗಳನ್ನು ನೆರವೇರಿಸಿದ್ದಾರೆ. ಅಲ್ಲದೆ ಲಕುಲೀಶ ಪರಂಪರೆಯ ಪಂಡಿತರು ಈ ಗ್ರಾಮದಲ್ಲಿದ್ದ ಬಗ್ಗೆ ಶಾಸನಗಳಿಂದ ತಿಳಿದು ಬರುತ್ತದೆ. ಇಲ್ಲಿರುವ ವಿಷ್ಣುಮಂದಿರ ಶಿವಾಲಯಗಳು ಹಾಗೂ ಶಕ್ತಿಮಂದಿರದ ಪೂಜೆ ಪುನಸ್ಕಾರದಂತಹ ಧರ್ಮಕಾರ್ಯಗಳು ನಿರಂತರವಾಗಿ ಮುಂದುವರೆಸಿಕೊಂಡು ಹೋಗುವುದಕ್ಕಾಗಿ ಮತ್ತು ಅರ್ಚಕರ ಜೀವನೋಪಾಯಕ್ಕಾಗಿ ಧನಕನಕಗಳನ್ನು, ಭೂಮಿಗಳನ್ನು ಈ ಗ್ರಾಮದ ದಂಡಾಧೀಶ್ವರರು, ಪುರದ ಒಡೆಯರಾದ ಹಂಡೆಗೌಡರು ದಾನ ಮಾಡುತ್ತಿದ್ದರು.

**ಮನಗೂಳಿ:** ಬಸವನ ಬಾಗೇವಾಡಿಯಿಂದ 20 ಕಿ. ಮೀ. ದೂರದಲ್ಲಿರುವ ಮನಗೂಳಿಯು ಮೊದಲು ತಾಲೂಕು ಕೇಂದ್ರವಾಗಿದ್ದು ಶಾಸನಗಳಲ್ಲಿ 'ಮಣಿಂಗವಳ್ಳಿ' ಅಥವಾ ಮನಿಂಗವಳ್ಳಿ ಎಂದು ಉಲ್ಲೇಖಗೊಂಡಿದೆ. ಬಾಗೇವಾಡಿ ಅಗ್ರಹಾರದ ಅಧಿಪತಿ ಮಂಡಿಗೇಯ ಮಾದರಸ(ಬಸವಣ್ಣನವರ ತಂದೆ) ಆಡಳಿತಕ್ಕೆ ಒಳಪಟ್ಟ 12 ಗ್ರಾಮಗಳಲ್ಲಿ ಮಣಿಂಗವಳ್ಳಿಯೂ ಒಂದೆಂದು ತಿಳಿದು ಬರುತ್ತದೆ. ಇಲ್ಲಿರುವ ರಾಮೇಶ್ವರ ದೇವಾಲಯವು ಕಲ್ಯಾಣ ಚಾಲುಕ್ಯರ ಕಾಲದ ರಚನೆಯಾಗಿದ್ದು ಗರ್ಭಗೃಹ ಹಾಗೂ ವಿಶಾಲವಾದ ನವರಂಗಗಳನ್ನು ಹೊಂದಿದೆ. ಗರ್ಭಗೃಹವು ಚೌರಸವಾಗಿದ್ದು, ಸಾಂಧಾರ ಪ್ರದಕ್ಷಿಣಾ ಪಥವನ್ನು ಹೊಂದಿದೆ. ಗರ್ಭಗೃಹದ ಬಾಗಿಲುವಾಡವು ಏಕಶಾಖಾ ಅಲಂಕಾರವನ್ನು ಹೊಂದಿದ್ದು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿದೆ. ಇದರ ಮುಂಭಾಗದಲ್ಲಿರುವ ನವರಂಗವು ವಿಶಾಲವಾಗಿದ್ದು 24 ಸ್ತಂಭಗಳ ರಚನೆಯಾಗಿದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಮನಗೂಳಿಯು ಪ್ರಸಿದ್ಧ ಅಗ್ರಹಾರವಾಗಿತ್ತು ಎಂದು ಶಾಸನಗಳಿಂದ ತಿಳಿದು ಬರುತ್ತದೆ.

**ಸಾಲೋಟಗಿ:** ಇಂಡಿಯಿಂದ ಆಗ್ನೇಯಕ್ಕೆ 8 ಕಿ.ಮೀ. ದೂರದಲ್ಲಿರುವ ಸಾಲೋಟಗಿ ಅಥವಾ ಶಾಸನೋಕ್ತ 'ಶಾಲಾಪಾವಟ್ಟಿಗೆ'ಯು ರಾಷ್ಟ್ರಕೂಟರ ಕಾಲದಿಂದಲೂ (ಕ್ರಿ. ಶ. 8, 9 ಶತಮಾನ) ಪ್ರಸಿದ್ಧ ವಿದ್ಯಾಕೇಂದ್ರವಾಗಿದೆ. ರಾಷ್ಟ್ರಕೂಟ ಚಕ್ರವರ್ತಿ ಮೂರನೇ ಕೃಷ್ಣನ ಕಾಲದ ಕ್ರಿ. ಶ. 945 ರ ಶಾಸನವು ಚಕ್ರಾಯುಧನೆಂಬ ಅಧಿಕಾರಿಯಿಂದ ಪಾವಿಟ್ಟಿಗೆಯಲ್ಲಿ ವಿದ್ಯಾಲಯ ಸ್ಥಾಪನೆ ಹಾಗೂ ವಿದ್ಯಾರ್ಥಿಗಳಿಗೆ ನೀಡಿದ ಭೂದಾನದ ಬಗೆಗೆ ಉಲ್ಲೇಖಿಸುತ್ತದೆ. ಈ

ಶಾಸನದಲ್ಲಿ ತತ್ರಧರ್ಮಸ್ಯ ವಿದ್ಯಾನಾಂ ಸ್ಥಾನಂ ಪೌಠಗೆ ಇತ್ಯಭೂತ್ 'ಅಗ್ರಹಾರಸ್ಪೂರಿ' ಹೀಗೆಂದು ವರ್ಣಿಸಲ್ಪಟ್ಟಿರುವ ಪೌಠಗೆಯು ಒಂದು ಹೆಸರಾಂತ ಅಗ್ರಹಾರವಾಗಿತ್ತು. ಇದು ಪಾವಿಟ್ಟಿಗೆ ಎಂತಲೂ ಕರೆಯಲ್ಪಡುತ್ತಿತ್ತು. ಈ ಪಾವಿಟ್ಟಿಗೆಯೇ ಸಾಲೋಟಗಿ ಎಂದು ಖಚಿತವಾಗಿ ಅಭಿಪ್ರಾಯ ಪಡಲಾಗಿದೆ. ಈ ಅಗ್ರಹಾರವು ತರ್ದವಾಡಿ ಸಾಸಿರವೆಂಬ ಪ್ರಾಂತ್ಯದಲ್ಲೇ ಅತಿಶ್ರೇಷ್ಠವಾದುದು ಎನ್ನಿಸಿಕೊಂಡಿದ್ದ ಕರ್ಣಪುರಿ ವಿಷಯ ಎಂಬ ಆಡಳಿತ ವಿಭಾಗದಲ್ಲಿ ನೆಲೆಗೊಂಡಿತ್ತೆಂದು ತಿಳಿದು ಬರುತ್ತದೆ. ಈ ವಿದ್ಯಾಕೇಂದ್ರದ ಕೀರ್ತಿಯು ಎಷ್ಟಿತ್ತೆಂದರೆ ನಾನಾಕಡೆಗಳಿಂದ ವಿದ್ಯಾರ್ಥಿಗಳು ಇದರಿಂದ ಪ್ರಭಾವಿತರಾಗಿ ತಮ್ಮ ಜ್ಞಾನಾರ್ಜನೆಯ ಉದ್ದೇಶದಿಂದ ಪಾವಟ್ಟಿಗೆಗೆ ಬರುತ್ತಿದ್ದರೆಂದು ಶಾಸನವು ಉಲ್ಲೇಖಿಸುತ್ತದೆ. ಈ ಶಾಸನದಲ್ಲಿ ವ್ಯಕ್ತವಾಗುವ ಬೇರೆ ಬೇರೆ ವಿವರಗಳೆಂದರೆ, ವಿದ್ಯಾಭ್ಯಾಸ ಕ್ರಮ ಅಥವಾ ಪದ್ಧತಿ, ವಿದ್ಯಾರ್ಥಿಗಳು, ಪಂಡಿತರು ಮುಂತಾದ ವಿಚಾರಗಳ ಬಗೆಗೆ ಮತ್ತು ವಿದ್ಯಾರ್ಥಿಗಳ ಹಾಗೂ ನಾಗರಿಕರ ಸಂಬಂಧದ ಬಗೆಗೆ ಸ್ವಾರಸ್ಯ ಪೂರ್ಣವಾದ ವಿವರಗಳನ್ನು ಶಾಸನವು ತಿಳಿಸುತ್ತದೆ. ಕಾಂಚನ ಮುದುವೊಳಲ್ ಎನ್ನುವುದು ಇನ್ನೊಂದು ಪ್ರಸಿದ್ಧ ಗ್ರಾಮವಾಗಿತ್ತೆಂದು ಈ ಶಾಸನದಿಂದ ವ್ಯಕ್ತವಾಗುತ್ತದೆ.

ಕ್ರಿ. ಶ. 11–12ನೇ ಶತಮಾನದ ಶಾಸನವು ಗೋವಣರಸ ಎಂಬುವನು ಇಲ್ಲಿನ ತ್ರೈಪುರುಷ ದೇವಾಲಯಕ್ಕೆ ನೀಡಿದ ಭೂದಾನವನ್ನು ಉಲ್ಲೇಖಿಸುತ್ತದೆ. ಈ ಅಗ್ರಹಾರವು ಧರ್ಮದ ಮತ್ತು ವಿದ್ಯೆಯ ಆವಾಸಸ್ಥಾನವಾಗಿತ್ತೆಂದು ಕ್ರಿ.ಶ. 1129ರ ಶಾಸನವು ಉಲ್ಲೇಖಿಸುತ್ತದೆ. ಹಾಗೂ ಇದು ವಿದ್ವಾಂಸರಿಂದ ತುಂಬಿತ್ತು. ಹೀಗೆ ಪ್ರಸಿದ್ಧಿಯನ್ನು ಪಡೆದ ಈ ಪಾವಿಟ್ಟಿಗೆ ಅಗ್ರಹಾರವು 9ನೇಯ ಶತಮಾನದಿಂದ 13ನೇ ಶತಮಾನದವರೆವಿಗೂ ಹೆಸರಾಂತ ಅಗ್ರಹಾರವಾಗಿತ್ತೆಂದು ಸ್ಪಷ್ಟವಾಗುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಮುನಿಸ್ವಾಮಿ ಆರ್., (1999), ವಿಜಯಪುರ ಜಿಲ್ಲೆಯ ಗೆಜೆಟಿಯರ್ (ಬಾಗಲಕೋಟೆ ಜಿಲ್ಲೆಯೂ ಸೇರಿದಂತೆ), ಬೆಂಗಳೂರು: ಕರ್ನಾಟಕ ಗೆಜೆಟಿಯರ್ ಇಲಾಖೆ (ಕರ್ನಾಟಕ ಸರ್ಕಾರ).
2. ದೇವರಕೊಂಡಾರೆಡ್ಡಿ, (2011), ಬಿಜಾಪುರ ಜಿಲ್ಲೆಯ ಶಾಸನಸೂಚಿ, ವಿದ್ಯಾರಣ್ಯ (ಹಂಪಿ): ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
3. ಕೊಪ್ಪಾ ಎಸ್. ಕೆ., (1990), ತರ್ದವಾಡಿ ನಾಡು: ಒಂದು ಅಧ್ಯಯನ, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
4. ಷೇಖ್ ಅಲಿ ಬಿ., (2018), ಕರ್ನಾಟಕ ಚರಿತ್ರೆ ಸಂಪುಟ–4, ವಿದ್ಯಾರಣ್ಯ (ಹಂಪಿ): ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
5. ಬಡಿಗೇರ ವಿ. ಎಸ್., (1994), ಬಸವನ ಬಾಗೇವಾಡಿ ತಾಲೂಕಿನ ಪುರಾತತ್ವ ಅವಶೇಷಗಳು– ಒಂದು ವರದಿ (ಇತಿಹಾಸ ದರ್ಶನ ಸಂಪುಟ–9), ಬೆಂಗಳೂರು: ಕರ್ನಾಟಕ ಇತಿಹಾಸ ಅಕಾಡೆಮಿ.
6. ಕಡಕೋಳ ಹೆಚ್.ಎಂ., (2010), ಬಿಜಾಪುರ ಜಿಲ್ಲಾ ಸಾಂಸ್ಕೃತಿಕ ಪರಂಪರೆ, ವಿಜಯಪುರ (ಬಿಜಾಪುರ): ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು.